ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 20.07.2023.

**ಮುಖ್ಯ ವಿಚಾರಣೆಃ ಪ್ರತಿವಾದಿಯ ಪರ ಶ್ರೀ. ಎಸ್.ಎಸ್.ಸಿ. ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆಯ ಸಲುವಾಗಿ ಪ್ರಮಾಣ ಪತ್ರವನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಅದರಲ್ಲಿರುವ ಎಲ್ಲಾ ಅಂಶಗಳು ಸತ್ಯದಿಂದಾ ಕೂಡಿದ್ದು, ಅದನ್ನು ನನ್ನ ಸೂಚನೆಯ ಮೇರೆಗೆ ತಯಾರಿಸಲಾಗಿರುತ್ತದೆ ಮತ್ತು ನಾನು ಅದಕ್ಕೆ ಸಹಿ ಮಾಡಿರುತ್ತೇನೆ.

ಇಂದು ನಾನು ದಾವೆಗೆ ಸಂಬಂಧಪಟ್ಟಂತೆ ಕೆಲವು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ, ಅವುಗಳನ್ನು ನನ್ನ ಪರವಾಗಿ ಪರಿಗಣಿಸಬೇಕಾಗಿ ವಿನಂತಿಸಿಕೊಳ್ಳುತ್ತೇನೆ.

ದಿಃ 08.06.1970 ರ ದೃಢಿಕೃತ ನಕಲಿನ ಕ್ರಯ ಪತ್ರವನ್ನು ನಿಡಿ-2 ಎಂದು, ಎರಡು ಕೈಬರಹದ ಪಹಣಿಗಳನ್ನು ನಿಡಿ-3 ಮತ್ತು ನಿಡಿ-4 ಎಂದು, ಒಂದು ಮ್ಯೂಟೇಷನ್‌ನ್ನು ನಿಡಿ-5 ಎಂದು, ಇನ್ನೊಂದು ಮ್ಯೂಟೇಷನ್‌ನ್ನು ನಿಡಿ-6 ಎಂದು, ಏಳು ಕೈಬರಹದ ಪಹಣಿಗಳನ್ನು ನಿಡಿ-7 ರಿಂದ ನಿಡಿ-13 ಎಂದು, ಆಕಾರಬಂದ್‌ನ್ನು ನಿಡಿ-14 ಎಂದು, ಮ್ಯೂಟೇಷನ್‌ನ್ನು ನಿಡಿ-15 ಎಂದು, ಭೂಮಿ ಅರ್ಜಿ ಸ್ವಿಕೃತಿಯನ್ನು ನಿಡಿ-16 ಎಂದು, ಹಿಂಬರಹವನ್ನು ನಿಡಿ-17 ಎಂದು, ಸರ್ವೆ ನಂ.27 ಆ ಕ್ಕೆ ಸಂಬಂಧಪಟ್ಟಂತೆ 2003-04 ನೇ ಸಾಲಿನಿಂದ 2015-16 ನೇ ಸಾಲಿನವರೆಗೆ ಇರುವ ಗಣಕಿಕೃತ ಪಹಣಿಗಳನ್ನು ಒಟ್ಟಾಗಿ ನಿಡಿ-18 ಎಂದು, ಸರ್ವೆ ನಂ.27 ಇ, ಕ್ಕೆ ಸಂಬಂಧಪಟ್ಟಂತೆ 2003-04 ನೇ ಸಾಲಿನಿಂದ 2015-16 ನೇ ಸಾಲಿನವರೆಗೆ ಇರುವ ಗಣಕಿಕೃತ ಪಹಣಿಗಳನ್ನು ಒಟ್ಟಾಗಿ ನಿಡಿ-19 ಎಂದು, ಸರ್ವೆ ನಂ.27 ಕ್ಕೆ

ಸಂಬಂಧಪಟ್ಟಂತೆ 2016-17 ನೇ ಸಾಲಿನಿಂದ 2022-23 ನೇ ಸಾಲಿನವರೆಗೆ ಇರುವ ಗಣಕಿಕೃತ ಪಹಣಿಗಳನ್ನು ಒಟ್ಟಾಗಿ ನಿಡಿ-20 ಎಂದು, ಎರಡು ಗಣಕಿಕೃತ ಮ್ಯೂಟೇಷನ್‌ಗಳನ್ನು ನಿಡಿ-21 ಮತ್ತು ನಿಡಿ-22 ಎಂದು, ಆಕಾರಬಂದ್ ಪ್ರಕಾರ ತಿದ್ದುಪಡೆಯನ್ನು ನಿಡಿ-23 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**